| ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಜಮಖಂಡಿ | |
|---|---|
| | ಸಿ.ಸಿ.ನಂ. – 1/2021 |
| | ಚಾ.ಸಾ – 7 |
| | ಪ್ರಾ.ಸಾ – 7 |
| ಸಾಕ್ಷಿದಾರರ ಹೆಸರು | ರಾಜೇಶ್ವರಿ ಗುಳೇದಗುಡ್ಡ |
| ತಂದೆ/ಗಂಡ ಹೆಸರು | ಬಸಲಿಂಗಪ್ಪ |
| ವಯಸ್ಸು | 59 ವರ್ಷ |
| ಉದ್ಯೋಗ | ಶಿಕ್ಷಕಿ, ಕುಂಚನೂರ ಪ್ರೌಢ ಶಾಲೆ, |
| ವಾಸಸ್ಥಳ | ಜಮಖಂಡಿ |

ಇಂದು ದಿನಾಂಕ 03.10.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ: ಸ.ಸ.ಅ ರವರಿಂದ:–**

ನಾನು ಬಿ.ಇ.ಓ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. ದಿನಾಂಕ 12.01.2018 ರಂದು ರೂ.19,639–00 ಗಳು ನನ್ನ ಖಾತೆಗೆ ಜಮಾ ಆಗಿತ್ತು. ಆರೋಪಿ ನನಗೆ ಫೋನ್ ಮಾಡಿ ಹೇಳಿದ್ದರಿಂದ ಸದರಿ ಹಣವನ್ನು ಅವರ ಖಾತೆಗೆ ಹಾಕಿದ್ದೇನೆ. ಆರೋಪಿ ನನ್ನ ತಾಯಿಗೆ ಆರೋಗ್ಯ ಸರಿ ಇಲ್ಲದ್ದರಿಂದ, ತನ್ನ ಸಂಬಂಧಿಕರು ನನ್ನ ಖಾತೆಗೆ ಹಣವನ್ನು ಹಾಕಿದ್ದಾರೆ ಅದನ್ನು ಮರಳಿ ತನ್ನ ಖಾತೆಗೆ ಹಾಕಲು ಆರೋಪಿ ಹೇಳಿದ್ದಾನೆ. ನನ್ನ ಹಾಗೆ 10–12 ಶಿಕ್ಷಕರಿಗೆ ಅದೇ ರೀತಿ ಹೇಳಿದ್ದಾನೆಂದು ಗೊತ್ತಾಗಿದೆ. ಬಿ.ಇ.ಓ ಕಚೇರಿಯಿಂದ ನನಗೆ ಫೋನ್ ಬಂದಿದೆ. ನಂತರ ನಾನು ಪೋಲೀಸ ಠಾಣೆಗೆ ಹೋಗಿದ್ದೇನೆ. ನಾವೆಲ್ಲ ಶಿಕ್ಷಕರು ಸೇರಿ ದೂರನ್ನು ಕೊಟ್ಟಿದ್ದೇವೆ.

**(ಈ ವೇಳೆಗೆ ಸ.ಸ.ಅ ರವರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ಕೋರಿದ್ದು, ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)**

**ಪಾಟೀ ಸವಾಲು : ಸ.ಸ.ಅ ರವರಿಂದ:–**

ಆರೋಪಿ ಇದೇ ರೀತಿ ನಮ್ಮ ಶಿಕ್ಷಕರ ಬ್ಯಾಂಕು ಖಾತೆಗೆ ಹಣ ಜಮಾ ಮಾಡಿ ಮರಳಿ ಕೇಳುತ್ತಿದ್ದ ವಿಚಾರ ನಮ್ಮ ತಾಲೂಕಿನ ಎಲ್ಲ ಶಿಕ್ಷಕರು ಮಾತನಾಡುತ್ತಿದ್ದರಿಂದ ಗೊತ್ತಾಯಿತು ಎಂದರೆ ಸರಿ. ಈ ಬಗ್ಗೆ ನಾವೆಲ್ಲಾ ಚಾಸಾ–1, ಚಾಸಾ–5, ಚಾಸಾ–6, ಚಾಸಾ–9 ರಿಂದ ಚಾಸಾ–15 ಬಿ.ಇ.ಓ ಕಛೇರಿಗೆ ಹೋಗಿದ್ದೆವು ಎಂದರೆ ಸರಿ. ಆಗ ಚಾಸಾ–4 ಮತ್ತು ಬಿ.ಸಿ. ಮಠ ಇವರು ದಾಖಲಾತಿಗಳನ್ನು ಪರಿಶೀಲನೆ ಮಾಡಲು ಬಿ.ಇ.ಓ ರವರು ತಿಳಿಸಿದ್ದಾರೆ ಎಂದರೆ ಸರಿ. ಯಾವುದೇ ಶಿಕ್ಷಕರು ಗಳಿಕೆ ರಜೆ ಅರ್ಜಿಯನ್ನು ಕೊಡದೇ ಇದ್ದರೂ ಸಹ

ಶಿಕ್ಷಕರ ಗಳಿಕೆ ರಜೆಯ 2ನೇ ಬಿಲ್ಲು ಮತ್ತು ಅರಿಯರ್ಸ ಬಿಲ್ಲನ್ನು ತಯಾರಿಸಿ ಹೆಚ್.ಆರ್.ಎಮ್.ಎಸ್. ತಂತ್ರಾಂಶದಲ್ಲಿ ನೊಂದಣಿ ಮಾಡಿ ಸರಕಾರಿ ಟೋಕನ್ ನಂ.416/17-18 ನೇದ್ದನ್ನು ಬಳಸಿ ಅಪ್ರುವಲ್ ಮಾಡಿ ಸರಕಾರಿ ಟೋಕನ್ ನಂ.260/17-18 ನ್ನು ಬಳಸಿ ಶಾಖಾಧಿಕಾರಿಗಳ ಸಹಿಯನ್ನು ಪಡೆಯದೇ ಅನುದಾನಿತ ಪೂರ್ಣ ಬಿಲ್ಲನ್ನು ಸೃಷ್ಟಿ ಮಾಡಿ ಜಮಖಂಡಿ ಉಪಖಜಾನೆಗೆ ದಿನಾಂಕ 28.12.2017 ಮತ್ತು 15.09.2017 ರಂದು ಕೊಟ್ಟು ಚೆಕ್‌ನ್ನು ಪಡೆದು ನನ್ನ ಬ್ಯಾಂಕ್ ಖಾತೆಗೆ ಹಾಕಿದ್ದರು ಎಂದರೆ ಸರಿ. ಇನ್ನುಳಿದವರ ಖಾತೆಗೂ ಸಹ ಹಣವನ್ನು ಹಾಕಿದ್ದರು ಎಂದರೆ ಸರಿ. ಚಾಸಾ-1 ಇವರು ಆರೋಪಿತನ ವಿರುದ್ಧ ದೂರನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಆರೋಪಿ ಸೃಷ್ಟಿಸಿದ ದಾಖಲಾತಿಗಳನ್ನು ನಾವು ಮತ್ತು ಚಾಸಾ-1 ರವರು ಕೂಡಿ ಸಹಿಗಳನ್ನು ಪರಿಶೀಲನೆ ಮಾಡಿದ್ದೇವೆ ಎಂದರೆ ಸರಿ. ಚಾಸಾ-1 ತಮ್ಮ ಸಹಿಗಳೇ ಇರಬಹುದು ಎಂದು ಹೇಳಿದರು ಎಂದರೆ ಸರಿ. ಆರೋಪಿ ಈತ ಚಾಸಾ-1 ಕೆಲಸದ ಒತ್ತಡದಲ್ಲಿ ಇರುವಾಗ ಅವರಿಗೆ ಮೋಸ ಮಾಡಿ ಸಹಿ ಪಡೆದುಕೊಂಡು ದುರುಪಯೋಗ ಪಡಿಸಿಕೊಂಡು ವಂಚನೆ ಮಾಡಿದ ಬಗ್ಗೆ ಗೊತ್ತಾಯಿತು ಎಂದರೆ ಸರಿ. ಆರೋಪಿ ಬಿ.ಇ.ಓ ಕಛೇರಿಯಲ್ಲಿ ಬಟವಾಡೆ ಕೆಲಸ ನಿರ್ವಹಿಸುತ್ತಿದ್ದರು ಎಂದರೆ ಸರಿ. ಶಿಕ್ಷಕರಿಂದ ಅರ್ಜಿಗಳನ್ನು ಪಡೆಯದೇ ಆರೋಪಿ ದಾಖಲಾತಿಗಳನ್ನು ಸೃಷ್ಟಿ ಮಾಡಿ ನನ್ನ ಖಾತೆಗೆ ರೂ.19,639-00 ಗಳು ಹಾಗೂ ಇನ್ನುಳಿದ ಶಿಕ್ಷಕರ ಖಾತೆಗೆ ರೂ.2,52,241-00 ಗಳ ಹಣವನ್ನು ಜಮಾ ಮಾಡಿದ್ದ ಎಂದರೆ ಸರಿ. ಆರೋಪಿ ಸರಕಾರಕ್ಕೆ ನಂಬಿಕೆ ದ್ರೋಹ ಹಾಗೂ ಮೋಸ ಮಾಡಿ ರೂ.3,11,118-00 ಗಳನ್ನು ದುರ್ಬಳಕೆ ಮಾಡಿಕೊಂಡಿದ್ದ ಎಂದರೆ ಸರಿ. ಈಗ ಓದಿ ಹೇಳಿದಂತೆ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿಯ ಪರ ಶ್ರೀ ಆರ್.ಹೆಚ್.ಕೆ. ವಕೀಲರಿಂದ:-**

ನಾನು ಗಳಿಕೆ ರಜೆ ನಗದೀಕರಣಕ್ಕಾಗಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಖಾತೆಗೆ ಹಣ ಜಮೆ ಆಗಬೇಕು ಎಂದರೆ ಒಂದು ವಿಧಾನ ಇದೆ ಎಂದರೆ ಸರಿ. ಅರ್ಜಿ ಕೊಟ್ಟಾಗ ಮಾತ್ರ ಬಿ.ಇ.ಓ ರವರಿಂದ ಪರವಾಣಿಗೆ ಪಡೆದು ಅವರ ಖಾತೆಗೆ ಜಮಾ ಆಗುತ್ತದೆ ಎಂದರೆ ಸರಿ.

ಯಾವುದೇ ಅರ್ಜಿ ಇಲ್ಲದೇ ನಮ್ಮ ಖಾತೆಗೆ ಹಣ ಜಮಾ ಆಗುವುದಿಲ್ಲ ಎಂದರೆ ಸರಿ. ಫೋಲೀಸ ಠಾಣೆಯಲ್ಲಿ ನನ್ನ ಹೇಳಿಕೆಯನ್ನು ಪಡೆದುಕೊಂಡಿಲ್ಲ, ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೆ. ಸರಿ ಅದೆ.

ಸಹಿ/-
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ ಜಮಖಂಡಿ.

ಸಾಕ್ಷಿಯ ಸಹಿ

| ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಜಮಖಂಡಿ | |
|---|---|
| | ಸಿ.ಸಿ.ನಂ. – 1/2021 |
| | ಚಾ.ಸಾ – 10 |
| | ಪ್ರಾ.ಸಾ – 8 |
| ಸಾಕ್ಷಿದಾರರ ಹೆಸರು | ಭಗವಾನ್ ಜೋರಾಪೂರ |
| ತಂದೆ/ಗಂಡ ಹೆಸರು | ಸಂತು |
| ವಯಸ್ಸು | 55 ವರ್ಷ |
| ಉದ್ಯೋಗ | ದ್ವಿತೀಯ ದರ್ಜೆ ಸಹಾಯಕ, ಸರಕಾರಿ ಪ್ರೌಢ ಶಾಲೆ ಮೈಗೂರ |
| ವಾಸಸ್ಥಳ | ಮೈಗೂರ. |

ಇಂದು ದಿನಾಂಕ 03.10.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ: ಸ.ಸ.ಅ ರವರಿಂದ:–**

ದಿನಾಂಕ 12.01.2018 ರಂದು ಆರೋಪಿ ನನ್ನ ಖಾತೆಗೆ ರೂ.20,000–00 ಗಳನ್ನು ಜಮೆ ಮಾಡಿದ್ದರು. ಆರೋಪಿ ನನಗೆ ಫೋನ್ ಮಾಡಿ ತನ್ನ ಸಂಬಂಧಿಕರು ನನ್ನ ಖಾತೆಗೆ ಹಣ ಹಾಕಿದ್ದು ಅದನ್ನು ಮರಳ ಕೊಡಲು ಹೇಳಿದ್ದಾನೆ. ಅದರಂತೆ ನಾನು ಹಣವನ್ನು ತೆಗೆದು ಆರೋಪಿಗೆ ಕೊಟ್ಟಿದ್ದೇನೆ. ಆರೋಪಿ ಯಾವ ರೀತಿಯಾಗಿ ಯಾವ ಕಾರಣಕ್ಕಾಗಿ ಹಾಕಿದ್ದಾರೆಂದು ನನಗೆ ಗೊತ್ತಿಲ್ಲ. ನಗದೀಕರಣ ಮಾಡುವಾಗ ತಪ್ಪಾಗಿ ನನ್ನ ಖಾತೆಗೆ ಹಣ ಬಂದಿದೆ. ಆರೋಪಿ ಎಲ್ಲರ ಕಡೆಯಿಂದ ಹಣ ತೆಗೆದುಕೊಳ್ಳುತ್ತಿದ್ದಾನೆ ಎಂದು ಕೇಳಿ ಗೊತ್ತಾಗಿದೆ.

**(ಈ ವೇಳೆಗೆ ಸ.ಸ.ಅ ರವರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ಕೋರಿದ್ದು, ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)**

**ಪಾಟೀ ಸವಾಲು : ಸ.ಸ.ಅ ರವರಿಂದ:–**

ಆರೋಪಿ ಇದೇ ರೀತಿ ನಮ್ಮ ಶಿಕ್ಷಕರ ಬ್ಯಾಂಕು ಖಾತೆಗೆ ಹಣ ಜಮಾ ಮಾಡಿ ಮರಳಿ ಕೇಳುತ್ತಿದ್ದ ವಿಚಾರ ನಮ್ಮ ತಾಲೂಕಿನ ಎಲ್ಲ ಶಿಕ್ಷಕರು ಮಾತನಾಡುತ್ತಿದ್ದರಿಂದ ಗೊತ್ತಾಯಿತು ಎಂದರೆ ಸರಿ. ಈ ಬಗ್ಗೆ ನಾವೆಲ್ಲಾ ಚಾಸಾ–1, ಚಾಸಾ–5, ಚಾಸಾ–6, ಚಾಸಾ–9, ಚಾಸಾ–11 ರಿಂದ ಚಾಸಾ–15 ಬಿ.ಇ.ಓ ಕಛೇರಿಗೆ ಹೋಗಿದ್ದೆವು ಎಂದರೆ ಸರಿ. ಆಗ ಚಾಸಾ–4 ಮತ್ತು ಬಿ.ಸಿ. ಮಠ ಇವರು ದಾಖಲಾತಿಗಳನ್ನು ಪರಿಶೀಲನೆ ಮಾಡಲು ಬಿ.ಇ.ಓ ರವರು ತಿಳಿಸಿದ್ದಾರೆ ಎಂದರೆ ಸರಿ. ಯಾವುದೇ ಶಿಕ್ಷಕರು ಗಳಿಕೆ ರಜೆ ಅರ್ಜಿಯನ್ನು ಕೊಡದೇ ಇದ್ದರೂ ಸಹ

ಶಿಕ್ಷಕರ ಗಳಿಕೆ ರಜೆಯ 2ನೇ ಬಿಲ್ಲು ಮತ್ತು ಅರಿಯರ್ಸ ಬಿಲ್ಲನ್ನು ತಯಾರಿಸಿ ಹೆಚ್.ಆರ್.ಎಮ್.ಎಸ್. ತಂತ್ರಾಂಶದಲ್ಲಿ ನೊಂದಣಿ ಮಾಡಿ ಸರಕಾರಿ ಟೋಕನ್ ನಂ.416/17-18 ನೇದ್ದನ್ನು ಬಳಸಿ ಅಪ್ರುವಲ್ ಮಾಡಿ ಸರಕಾರಿ ಟೋಕನ್ ನಂ.260/17-18 ನ್ನು ಬಳಸಿ ಶಾಖಾಧಿಕಾರಿಗಳ ಸಹಿಯನ್ನು ಪಡೆಯದೇ ಅನುದಾನಿತ ಪೂರ್ಣ ಬಿಲ್ಲನ್ನು ಸೃಷ್ಟಿ ಮಾಡಿ ಜಮಖಂಡಿ ಉಪಖಜಾನೆಗೆ ದಿನಾಂಕ 28.12.2017 ಮತ್ತು 15.09.2017 ರಂದು ಕೊಟ್ಟು ಚೆಕ್‌ನ್ನು ಪಡೆದು ನನ್ನ ಬ್ಯಾಂಕ್ ಖಾತೆಗೆ ಹಾಕಿದ್ದರು ಎಂದರೆ ಸರಿ. ಇನ್ನುಳಿದವರ ಖಾತೆಗೂ ಸಹ ಹಣವನ್ನು ಹಾಕಿದ್ದರು ಎಂದರೆ ಸರಿ. ಚಾಸಾ-1 ಇವರು ಆರೋಪಿತನ ವಿರುದ್ಧ ದೂರನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಆರೋಪಿ ಸೃಷ್ಟಿಸಿದ ದಾಖಲಾತಿಗಳನ್ನು ನಾವು ಮತ್ತು ಚಾಸಾ-1 ರವರು ಕೂಡಿ ಸಹಿಗಳನ್ನು ಪರಿಶೀಲನೆ ಮಾಡಿದ್ದೇವೆ ಎಂದರೆ ಸರಿ. ಚಾಸಾ-1 ತಮ್ಮ ಸಹಿಗಳೇ ಇರಬಹುದು ಎಂದು ಹೇಳಿದರು ಎಂದರೆ ಸರಿ. ಆರೋಪಿ ಈತ ಚಾಸಾ-1 ಕೆಲಸದ ಒತ್ತಡದಲ್ಲಿ ಇರುವಾಗ ಅವರಿಗೆ ಮೋಸ ಮಾಡಿ ಸಹಿ ಪಡೆದುಕೊಂಡು ದುರುಪಯೋಗ ಪಡಿಸಿಕೊಂಡು ವಂಚನೆ ಮಾಡಿದ ಬಗ್ಗೆ ಗೊತ್ತಾಯಿತು ಎಂದರೆ ಸರಿ. ಆರೋಪಿ ಬಿ.ಇ.ಓ ಕಛೇರಿಯಲ್ಲಿ ಬಟವಾಡೆ ಕೆಲಸ ನಿರ್ವಹಿಸುತ್ತಿದ್ದರು ಎಂದರೆ ಸರಿ. ಶಿಕ್ಷಕರಿಂದ ಅರ್ಜಿಗಳನ್ನು ಪಡೆಯದೇ ಆರೋಪಿ ದಾಖಲಾತಿಗಳನ್ನು ಸೃಷ್ಟಿ ಮಾಡಿ ನನ್ನ ಖಾತೆಗೆ ರೂ.20,000-00 ಗಳು ಹಾಗೂ ಇನ್ನುಳಿದ ಶಿಕ್ಷಕರ ಖಾತೆಗೆ ರೂ.2,52,241-00 ಗಳ ಹಣವನ್ನು ಜಮಾ ಮಾಡಿದ್ದ ಎಂದರೆ ಸರಿ. ಆರೋಪಿ ಸರಕಾರಕ್ಕೆ ನಂಬಿಕೆ ದ್ರೋಹ ಹಾಗೂ ಮೋಸ ಮಾಡಿ ರೂ.3,11,118-00 ಗಳನ್ನು ದುರ್ಬಳಕೆ ಮಾಡಿಕೊಂಡಿದ್ದ ಎಂದರೆ ಸರಿ. ಈಗ ಓದಿ ಹೇಳಿದಂತೆ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ.

**<u>ಪಾಟೀ ಸವಾಲು ಆರೋಪಿಯ ಪರ ಶ್ರೀ ಆರ್.ಹೆಚ್.ಕೆ. ವಕೀಲರಿಂದ:-</u>**

ಸಾಮಾನ್ಯವಾಗಿ ಖಾತೆಗೆ ಹಣ ಜಮೆ ಆದರೆ ಎಲ್ಲಿಂದ ಬಂದಿದೆ ಎಂದು ಗೊತ್ತಾಗುತ್ತದೆ ಎಂದರೆ ಸರಿ. ರೂ.20,000-00 ಗಳು ಟ್ರಸರಿಯಿಂದ ಹಣ ಜಮೆ ಆಗಿತ್ತು ಎಂದರೆ ಸರಿ. ಈ ರೀತಿ ಹಣ ಬಂದಿದೆ ಎಂದು ಬಿ.ಇ.ಓ ಕಚೇರಿಗೆ ಹೋಗಿ ವಿಚಾರಿಸಿಲ್ಲ. ನಾನು ಬಿ.ಇ.ಓ ಕಚೇರಿಗೆ ಹೋಗಿಲ್ಲ ಎಂದರೆ ಸರಿ. ನಾನು ಗಳಿಕೆ ರಜೆಗೆ

ಅರ್ಜಿಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ಹಣ ಜಮಾ ಆಗಿದೆ ಎಂದರೆ ಸರಿಯಲ್ಲ. ನಾನು ಅರ್ಜಿ ಕೊಡದೇ ಸರಕಾರದಿಂದ ನನ್ನ ಖಾತೆಗೆ ಹಣ ಜಮೆ ಆಗಲು ಸಾಧ್ಯತೆ ಇಲ್ಲ ಅನ್ನುವುದು ಸರಿಯಲ್ಲ. ಆರೋಪಿತನ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೆ. ಸರಿ ಅದೆ.

ಸಹಿ/-
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಸಾಕ್ಷಿಯ ಸಹಿ ಹಾಗೂ ಜೆ.ಎಂ.ಎಫ್.ಸಿ ಜಮಖಂಡಿ.

| | |
|---|---|
| **ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಜಮಖಂಡಿ** | |
| | **ಸಿ.ಸಿ.ನಂ. – 1/2021** |
| | **ಚಾ.ಸಾ – 11** |
| | **ಪ್ರಾ.ಸಾ – 9** |
| **ಸಾಕ್ಷಿದಾರರ ಹೆಸರು** | **ಪುಂಡಲೀಕ ಮಸುತಿ** |
| **ತಂದೆ/ಗಂಡ ಹೆಸರು** | **ಮಲ್ಲಾರಿ** |
| **ವಯಸ್ಸು** | **64 ವರ್ಷ** |
| **ಉದ್ಯೋಗ** | **ನಿವೃತ್ತ ಮುಖ್ಯ ಶಿಕ್ಷಕ** |
| **ವಾಸಸ್ಥಳ** | **ವಿಜಯಪೂರ.** |

ಇಂದು ದಿನಾಂಕ 03.10.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ: ಸ.ಸ.ಅ ರವರಿಂದ:–**

ಜಗಳಾದ ಲಕ್ಷ್ಮೀ ನಗರದ ಕಿರಿಯ ಪ್ರಾಥಮಿಕ ಶಾಲೆಯಲ್ಲಿ 2016 ರಿಂದ 2018 ರವರೆಗೆ ಸಹಶಿಕ್ಷಕನಾಗಿ ಕಾರ್ಯನಿರ್ವಹಿಸಿದ್ದೇನೆ. 2018 ರಲ್ಲಿ ಆರೋಪಿ ತನ್ನ ತಾಯಿಗೆ ಆರೋಗ್ಯ ಸರಿ ಇಲ್ಲ, ನನ್ನ ಸಂಬಂಧಿಕರು ನಿಮ್ಮ ಖಾತೆಗೆ ಹಣ ಹಾಕಿದ್ದು, ರೂ.20,000–00 ಒಮ್ಮೆ ಇನ್ನೊಮ್ಮೆ ರೂ.25,000–00 ಹಣ ಹಾಕಿದ್ದು, ಅದನ್ನು ಮರಳಿ ಕೊಡಲು ಹೇಳಿರುತ್ತಾನೆ. ಒಟ್ಟು ರೂ.45000–00 ಗಳನ್ನು ತೆಗೆದು ಆರೋಪಿತನಿಗೆ ಕೊಟ್ಟಿದ್ದೇನೆ. ನಂತರ ಎಲ್ಲಾ ಶಿಕ್ಷಕರನ್ನು ಕರೆಸಿ ಕಚೇರಿಯಲ್ಲಿ ವಿಚಾರಣೆ ಮಾಡಿದ್ದಾರೆ. ನಮ್ಮ ಸಂಘದವರು ವಿಚಾರಣೆಗೆ ಕರೆಸಿದ್ದರು.

ಈ ಸಮಯದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೆ. ಸರಿ ಅದೆ.

ಸಹಿ/–

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ಸಾಕ್ಷಿಯ ಸಹಿ

ಹಾಗೂ ಜೆ.ಎಂ.ಎಫ್.ಸಿ ಜಮಖಂಡಿ.